# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:21-11-2020 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಿಂಗಸಂದ್ರ ವಾರ್ಡ್ ಸಂಖ್ಯೆ-191 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ಪ್ರಸನ್ನಕುಮಾರ.ವಿ. ಉಪ ಆಯುಕ್ತರು ರವರ ಸಮ್ಮುಖದಲ್ಲಿ ಅವರ ಅನುಮತಿಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ಪ್ರಾರಂಭದಲ್ಲಿ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಜಿ.ಹೆಚ್.ಮಲ್ಲಾಪುರ, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-191, ಸಿಂಗಸಂದ್ರ ರವರು ಸಭೆಗೆ ಹಾಜರಾಗಿದ್ದಂತಹ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಯಲ್ಲಿ ಮಂಡಿಸಿ ಸಂಬಂಧಪಟ್ಟ ಅಧಿಕಾರಿಗಳಿಂದ ಹಿಂದಿನ ಸಭೆಯ ನಡಾವಳಿಗಳ ಪಾಲನೆಯ ಬಗ್ಗೆ ಮಾಹಿತಿ ಪಡೆಯಲಾಯಿತು. ಅದರಂತೆ ಇಂದಿನ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಈ ಕೆಳಕಂಡಂತಿರುತ್ತದೆ.

1. ಕೋವಿಡ್-19 ಮಹಾಮಾರಿ ಸಾಂಕ್ರಮಿಕ ರೋಗ ಹರಡದಂತೆ ಮುಂಜಾಗೃತ ಕ್ರಮ ಕೈಗೊಳ್ಳಲು ತೆಗೆದುಕೊಳ್ಳಬಹುದಾದ ಕ್ರಮಗಳು.

2. ವಿಪತ್ತು ನಿರ್ವಹಣಾ ಸಮಿತಿ(ಡಿಸಾಸ್ಟರ್ ಮ್ಯಾನೇಜಮೆಂಟ್ ಕಮಿಟಿ) ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ.

3. ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವುದು.

4. ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಚರ್ಚಿಸುವುದು,

5. ಮಳೆಯಿಂದ ಸಂಭವಿಸಿದ/ ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸುವುದು,

6. BWSSB Project ಮತ್ತು ನಿರ್ವಹಣೆಯ ಬಗ್ಗೆ ಚರ್ಚಿಸುವುದು,

7. ಕುಡಿಯುವ ನೀರು ಸರಬರಾಜು ಬಗ್ಗೆ ಚರ್ಚಿಸುವುದು,

8. ಗೇಲ್ ಗ್ಯಾಸ್ ಪೈಪ್ ಲೈನ್ ನಿರ್ವಹಣೆಯ ಬಗ್ಗೆ ಚರ್ಚಿಸುವುದು,

Scanned by CamScanner

ವಾರ್ಡ್ ನಂ 191 ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದವರು

| ಕ್ರ.ಸಂ | ಹೆಸರು | ಹುದ್ದೆಯ ಹೆಸರು | ಮೊಬೈಲ್ ನಂಬರ್ |
|---|---|---|---|
| 1 | ಶ್ರೀ.ಪ್ರಸನ್ನಕುಮಾರ. ವಿ. | ನೋಡಲ್ ಅಧಿಕಾರಿಗಳು | 9480683467 |
| 2 | ಶ್ರೀ.ಜಿ.ಹೆಚ್.ಮಲ್ಲಾಪುರ | ಕಾರ್ಯದರ್ಶಿ (ಸಹಾಯಕ ಅಭಿಯಂತರರು) | 9448766888 |
| 3 | ಡಿ.ಪಿ.ಟಿ ಶ್ಯಾಮ | ಬಿ.ಡಬ್ಲ್ಯೂ.ಎಸ್.ಎಸ್.ಬಿ. ಎಲ್ ಅಂಡ್ ಟಿ | 9787191369 |
| 4 | ಶ್ರೀ.ನಾಗರಾಜ್. ಹೆಚ್ | ಪಿ.ಎಸ್.ಐ. ಪರಪ್ಪನಅಗ್ರಹಾರ | 9148886195 |
| 5 | ಪರಮೇಶ್ ಎ.ಹೆಚ್ | ಅರ್ಟಿಕಲ್ಚರ್ ಬೊಮ್ಮನಹಳ್ಳಿ | 9886481007 |
| 6 | ಸುರೇಸ್ ಬಾಬು | ಅಸೆಸ್ಸರ್ (ಎ.ಆರ್.ಒ) | 9449611621 |
| 7 | ಮನು | ಅಸೆಸ್ಸರ್ (ಎ.ಆರ್.ಒ) | 9164605512 |
| 8 | ಶ್ರೀನಿವಾಸಲು | ಟಿ.ಐ ಕೂಡ್ಲು | 9845496371 |
| 9 | ಶ್ರೀ ಮಹೇಶ್ ಕುಮಾರ್ | ಜೆ.ಹೆಚ್.ಐ. | 9379344125 |
| 10 | ಮನೋಹರ್ ಪಿ | ಮಾರ್ಷಲ್ | 8123919519 |
| 11 | ರವಿ ಕುಮಾರ್ | ಗಾರ್ಬೇಜ್ ಸೂಪರ್ ವೈಸರ್ | 9731138383 |
| 12 | ಶ್ರೀ.ಕೆ.ಬಿ. ಮಂಜುನಾಥ | ಸದಸ್ಯರು | 9845252999 |
| 13 | ನಾಗಪ್ಪ | ಸದಸ್ಯರು | 9845334739 |
| 14 | ಶ್ರೀ.ಮೋಹನ್ ಕುಮಾರ್ | ಬೆಸ್ಕಾಂ ಎ.ಇ. | 9449841578 |
| 16 | ಶ್ರೀ.ರಮೇಶ್. | ಎ.ಇ.ಇ. ಮೇಜರ್ ರೋಡ್ | 9108028820 |

ವಾರ್ಡ್ ನಂ 191 ವಾರ್ಡ್ ಸಮಿತಿ ಸಭೆಯಲ್ಲಿ ಗೈರು ಹಾಜರಾದವರು

| ಕ್ರ.ಸಂ. | ವಾರ್ಡ್ ಸಮಿತಿ ಸದಸ್ಯರುಗಳ ಹೆಸರು | ಪದನಾಮ | ಮೊಬೈಲ್ ನಂಬರ್ |
|---|---|---|---|
| 1 | ಶ್ರೀ.ಇಂದ್ರಜಿತ್ ಲಮಾಣಿ | ಸಹಾಯಕ ಕಂದಾಯ ಅಧಿಕಾರಿಗಳು | 9731321490 |
| 2 | ಶ್ರೀ.ಜಿ.ರಾಜಪ್ಪ | ತೆರಿಗೆ ವಸೂಲಿಗಾರರು | 9880430686 |
| 3 | ಸಾಯಿಬಣ್ಣ. ಎ.ಇ. | ಬಿ,ಡಬ್ಲ್ಯೂ.ಎಸ್.ಎಸ್.ಬಿ. | 9845444039 |
| 4 | ಶ್ರೀ.ತಮ್ಮಯ್ಯ. ಎ.ಇ. | ಎಸ್.ಡಬ್ಲ್ಯೂ.ಡಿ | 9945522330 |
| 5 | ಶ್ರೀ.ಚಂದ್ರಶೇಖರ್ | ತೋಟಗಾರಿಕೆ ಅಧೀಕ್ಷಕರು | 9845014293 |
| 6 | ಶ್ರೀ.ವಿನಯ್ | ಸ.ಕಾ.ಅ. ಬಿ.ಎಮ್.ಆರ್.ಸಿ.ಎಲ್. | 9480823156 |
| 7 | ಶ್ರೀ.ಸಂತೋಷ್ ಕುಮಾರ್ | ಸ.ಕಾ.ಅ. ಘನತ್ಯಾಜ್ಯ ನಿರ್ವಹಣಾ ವಿಭಾಗ | 9480685632 |

Scanned by CamScanner

**ಸಭೆಯ ನಡಾವಳಿಗಳು**

1. ಇಂದಿನ ಸಭೆಯಲ್ಲಿ ಹಿಂದಿನ ಸಭೆಯಲ್ಲಿ ನಡೆದಂತೆ ಇ-ಬಿಟ್ ಸ್ಥಳಗಳ ಒಟ್ಟು 106 ಸ್ಥಳಗಳಲ್ಲಿ ಇ-ಬಿಟ್ ವ್ಯವಸ್ಥೆ ಕೈಗೊಂಡಿರುವ ಬಗ್ಗೆ ನೋಡಲ್ ಅಧಿಕಾರಿಗಳಿಗೆ ಪೋಲಿಸ್ ಅಧಿಕಾರಿಗಳು ವರದಿಯನ್ನು ಸಲ್ಲಿಸಿದರು.

2. ಕೂಡ್ಲು ಗ್ರಾಮದಲ್ಲಿ ಬಫರ್ ಜೋನ್ ಎಂದು ನೋಟಿಸ್ ಕೊಟ್ಟಿದ್ದಾರೆ, ಟ್ಯಾಕ್ಸ್ ತೆಗೆದುಕೊಳ್ಳುತ್ತಿಲ್ಲ, ಎಂದು ಸ್ಥಳಿಯರು ದೂರನ್ನು ಸಲ್ಲಿಸಿದರು, ಅದಕ್ಕೆ ವಾರ್ಡ್ ಸಮಿತಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು ಇದರ ಬಗ್ಗೆ ಕ್ರಮ ವಹಿಸಲು ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು.

3. ಕೂಡ್ಲು ಗ್ರಾಮದಲ್ಲಿ ಸ್ಯಾನಿಟರಿ ಕೆಲಸ ಶುರುವಾಗಿದೆ. ಬೆಸ್ಕಾಂ ಅಧಿಕಾರಿಗಳು ಎಲೆಕ್ಟ್ರಿಕಲ್ ಕೇಬಲ್ ಹೋಗಿರುವ ಸ್ಥಳವನ್ನು ಗುರುತಿಸಿಕೊಡಬೇಕೆಂದು ಬೆಸ್ಕಾಂ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

4. ಕೂಡ್ಲು ಶನಿಮಹಾತ್ಮ ದೇವಸ್ಥಾನದ ಹತ್ತಿರ ರಾತ್ರಿ ವೇಳೆ ಕುಡಿದು ಗಲಾಟೆ ಮಾಡುತ್ತಿದ್ದಾರೆ ಎಂದು ಸ್ಥಳಿಯರು ದೂರನ್ನು ನೀಡಿದರು ಅದಕ್ಕೆ ವಾರ್ಡ್ ಸಮಿತಿ ಅಧ್ಯಕ್ಷರು ಹೊಯ್ಸಳ 100 ಗೆ ಕರೆ ಮಾಡಲು ಸ್ಥಳಿಯರಿಗೆ ಸೂಚಿಸಿದರು.

5. ಕೂಡ್ಲು ಗ್ರಾಮಠಾಣಾ ದಲ್ಲಿ ಎಲ್ & ಟಿ ಯವರು ಮುಖ್ಯರಸ್ತೆಯಲ್ಲಿ ಮಾತ್ರ ಸ್ಯಾನಿಟರಿ ಕೆಲಸ ಮಾಡುತ್ತಿದ್ದು, ಚಿಕ್ಕಚಿಕ್ಕ ರಸ್ತೆಗಳಲ್ಲಿ ಬರುವ ಸ್ಯಾನಿಟರಿ ಚೆಂಬರ್ ಕೆಲಸ ಮತ್ತು ಪೈಪ್‌ಲೈನ್ ಕೆಲಸ ಮಾಡುತ್ತಿಲ್ಲವೆಂದು ಸ್ಥಳಿಯರು ದೂರನ್ನು ಸಲ್ಲಿಸಿದರು, ಅದಕ್ಕೆ ನೋಡಲ್ ಅಧಿಕಾರಿಗಳು ಚಿಕ್ಕಚಿಕ್ಕ ರಸ್ತೆಗಳಲ್ಲೂ ಕೆಲಸವನ್ನು ನಿರ್ವಹಿಸಲು ಎಲ್ & ಟಿ ಅಧಿಕಾರಿಗಳಿಗೆ ಸೂಚಿಸಿದರು.

6. ಕೂಡ್ಲು ಗ್ರಾಮದ ತಿರುಮಲ ದೇವಸ್ಥಾನ ರಸ್ತೆಗಳಲ್ಲಿ ಅನವಶ್ಯಕವಾದಗಿಡಗಳು, ಕಳ್ಳಿಗಳು ಬೆಳೆದಿದ್ದು, ರಸ್ತೆಯ ಎರಡು ಬದಿಯಲ್ಲಿ ಸ್ವಚ್ಛಗೊಳಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

7. ಎಲ್ & ಟಿ ಯವರಿಗೆ ಆದಷ್ಟು ಬೇಗ ಸ್ಯಾನಿಟರಿ ಲೈನ್ ಮಾಡಬೇಕು, ಮತ್ತು ಪ್ರಪ್ರಥಮವಾಗಿ ರಾಮರೆಡ್ಡಿ ಸರ್ಕಲ್ ನಿಂದ ರಿಲೆಯೇಬಲ್ ವುಡ್ಸ್ ಬಡಾವಣೆ ಮುಖಾಂತರ ಮತ್ತು ಅದರ ಸುತ್ತಮುತ್ತಲಿನ ರಸ್ತೆಯಲ್ಲಿ ಬರುವ ಸ್ಯಾನಿಟರಿ ಪೈಪ್‌ಲೈನ್ ಕಾರ್ಯನಿರ್ವಹಿಸಲು ವಾರ್ಡ್ ಸಮಿತಿ ಅಧ್ಯಕ್ಷರು ಎಲ್ & ಟಿ ಅಧಿಕಾರಿಗಳಿಗೆ ಸೂಚಿಸಿದರು.

Scanned by CamScanner

8. ನಾಗನಾಥಪುರದಲ್ಲಿ ಬರುವ ಶಿವಾರೆಡ್ಡಿ ಬಡಾವಣೆಯಲ್ಲಿ ಟಾರ್ ಇಲ್ಲದ ರಸ್ತೆಗಳಲ್ಲಿ ತುರ್ತಾಗಿ ಸ್ಯಾನಿಟರಿ ಪೈಪ್‌ಲೈನ್ ಕಾರ್ಯನಿರ್ವಹಿಸಲು ವಾರ್ಡ್ ಸಮಿತಿ ಅಧ್ಯಕ್ಷರು ಎಲ್ & ಟಿ ಅಧಿಕಾರಿಗಳಿಗೆ ಸೂಚಿಸಿದರು.

9. ಕೂಡ್ಲು ಗ್ರಾಮಠಾಣಾವನ್ನು ಸರ್ವೆ ಮಾಡಿಸಲು ಆಸ್ತಿ ವಿಭಾಗ ಬಿ.ಬಿ.ಎಂ.ಪಿಗೆ ಮನವಿ ಸಲ್ಲಿಸಲು ಸಹಾಯಕ ಕಂದಾಯ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

10. ಕೂಡ್ಲು ಸ್ಮಶಾನವು ಗಿಡ, ಪೊಟರೆ, ಹುಲ್ಲು ಬೆಳೆದಿದ್ದು, ಅದನ್ನು ಸ್ವಚ್ಛಗೊಳಿಸಲು ಸ್ಥಳಿಯರು ಮನವಿ ಮಾಡಿಕೊಂಡರು ಅದಕ್ಕೆ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಅಭಿಯಂತರರಿಗೆ ಕೂಡ್ಲು ಸ್ಮಶಾನವನ್ನು ಸ್ವಚ್ಛಗೊಳಿಸಲು ಸೂಚಿಸಿದರು.

11. ವಾರ್ಡ್ ವ್ಯಾಪ್ತಿಯ ಎ.ಇ.ಸಿ.ಎಸ್ ಬಡಾವಣೆ, ಎ–ಬ್ಲಾಕ್, 16ನೇ ಮುಖ್ಯರಸ್ತೆಯಿಂದ ಸ್ಯಾನಿಟರಿ ಕೆಲಸ 2 ತಿಂಗಳಿನಿಂದ ನಿಲ್ಲಿಸಿದ್ದಾರೆ, ಇದರಿಂದ ಮೋರಿ ನೀರು ಅದರಲ್ಲಿ ಸೇರಿ ವಾಸನೆ ಬರುತ್ತಿದೆ ಎಂದು ಮೈ ಫ್ಲವರ್ ರೆಸಿಡೆನ್ಸಿ ಅಸೋಸಿಯೇಷನ್ ರವರು ಪತ್ರದ ಮೂಲಕ ದೂರನ್ನು ಸಲ್ಲಿಸಿದರು. ಅದರಂತೆ ಈ ಅವ್ಯವಸ್ಥೆಯನ್ನು ಸರಿಪಡಿಸಲು ವಾರ್ಡ್ ಸಮಿತಿ ಅಧ್ಯಕ್ಷರು ಎಸ್.ಡಬ್ಲ್ಯೂ.ಡಿ. ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದರು.

12. ವಾರ್ಡ್ ನಂ 191 ಸಿಂಗಸಂದ್ರ ವಾರ್ಡ್ ನಲ್ಲಿ ಒಟ್ಟು ಪೌರಕಾರ್ಮಿಕರು 135 ಜನರಿದ್ದು, ಇದರಲ್ಲಿ 1 ವರ್ಷದಿಂದ ಕೆಲಸಕ್ಕೆ ಸೇರಿಕೊಂಡು ಇಲ್ಲಿಯವರೆವಿಗೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸುಮಾರು 8 ತಿಂಗಳಿನಿಂದ ವೇತನ ನೀಡಿರುವುದಿಲ್ಲ ಎಂದು ಕಿರಿಯ ಆರೋಗ್ಯ ಪರಿವೀಕ್ಷರು ಮನವಿ ಪತ್ರವನ್ನು ವಾರ್ಡ್ ಸಮಿತಿ ಅಧ್ಯಕ್ಷರಿಗೆ ನೀಡಿದರು ಅದಕ್ಕೆ ಪ್ರತಿಯಾಗಿ ವಾರ್ಡ್ ಸಮಿತಿ ಅಧ್ಯಕ್ಷರು ಪೌರಕಾರ್ಮಿಕರ ವೇತನವನ್ನು ನೀಡಲು ಎಸ್.ಡಬ್ಲ್ಯೂ.ಎಂ. ಅಧಿಕಾರಿಗಳಿಗೆ ಸೂಚಿಸಿದರು.

13. ಕೆ.ಸಿ.ಡಿ.ಸಿ ಯಿಂದ ಬಿರ್ಲಾ ಸರ್ಕಲ್ ವರೆಗೆ ಮತ್ತು ಕಾರ್ಪೊರೇಷನ್ ಬ್ಯಾಂಕ್‌ನಿಂದ ಹೊಸರೋಡ್ ವರೆಗೆ ರಸ್ತೆ ಹಾಳಾಗಿದ್ದು, ಮತ್ತು ಸರಿಪಡಿಸಲು ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು ಮೇಜರ್ ರೋಡ್ ಎ.ಇ.ಇ. ರವರಿಗೆ ಸೂಚಿಸಿದರು.

14. ಎ.ಇ.ಸಿ.ಎಸ್ ಬಡಾವಣೆ ಗಣೇಶ ದೇವಸ್ಥಾನದಲ್ಲಿ ಬರುವ ಪಾರ್ಕ್‌ನ್ನು ಅಭಿವೃದ್ಧಿಪಡಿಸಲು ವಾರ್ಡ್ ಸಮಿತಿ ಅಧ್ಯಕ್ಷರು ಸಂಬಂದಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.

Scanned by CamScanner

15. ಶನಿಮಹಾತ್ಮ ದೇವಸ್ಥಾನದ ಹಿಂದೆ ಸಾರ್ವಜನಿಕರು ಕಸ ಹಾಕುತ್ತಿದ್ದು, ಅಲ್ಲಿ ಕಸ ಹಾಕದಂತೆ ನೋಡಿಕೊಳ್ಳಬೇಕು, ಮತ್ತು ಅಲ್ಲಿ ಜಾಲರಿ ಹಾಕಲು ಸ್ಥಳೀಯರಿಂದ ಮನವಿ ಮಾಡಿಕೊಂಡರು.

16. ಟ್ರಾಫಿಕ್ ರವರು ಹಿಂದಿನ ಸಭೆಯಲ್ಲಿ ನಡೆದಂತೆ 4 ಕ್ಯಾಮರಾಗಳು, ಟ್ರಾಫಿಕ್‌ಸಿಗ್ನಲ್‌ಗಳು ಅಡಾಪ್ ಟೀವ್ ಸಿಗ್ನಲ್‌ಗಳು, ಪೆಲಿಕಾನ್ ಸಿಗ್ನಲ್‌ಲೈಟ್ ಹಾಗೂ ಬ್ಲಿಂಕರ್ಸ್ ಗಳ ಸ್ಥಿತಿಗತಿ ಹಾಗೂ ಕಾರ್ಯನಿರ್ವಹಣೆ ಬಗ್ಗೆ ಹಾಗೂ ಇಂದಿನ ಸಭೆಯಲ್ಲಿ ಸಿಸಿ ಟಿವಿಗಳ ವರದಿಯನ್ನು ಸದರಿ ವಾರ್ಡಿನಲ್ಲಿ ಬರುವ ಸುಮಾರು 106 ಸಿಸಿಟಿವಿ ಗಳ ವರದಿಯನ್ನು ನೋಡಲ್ ಅಧಿಕಾರಿಗಳಿಗೆ ಮಾಹಿತಿಗಳ ದಾಖಲೆ ನೀಡಿದರು. ಈ ಕೆಳಗೆ ನಮೂದಿಸಿರು ಸ್ಥಳಗಳ ದಾಖಲೆಗಳನ್ನು ಒದಗಿಸಿರುತ್ತಾರೆ (ಸರ್ವೆ ಲೆನ್ಸ್ ಕ್ಯಾಮರಾಗಳ ವಿವರ )

- ನಾಗನಾಥಪುರ ಜಂಕ್ಷನ್
- ವೀರಸಂದ್ರ ಜಂಕ್ಷನ್
- ದೊಡ್ಡತೋಗೂರು ಜಂಕ್ಷನ್
- ಕೂಡ್ಲು ಬಿ.ಬಿ.ಎಂ.ಪಿ ಜಂಕ್ಷನ್
- ಬಿರ್ಲಾ ಜಂಕ್ಷನ್
- ಜೈಲ್ ಜಂಕ್ಷನ್
- ಇಸಿ–1 ಜಂಕ್ಷನ್

17. ಎ.ಇ.ಸಿ.ಎಸ್. ಎ–ಬ್ಲಾಕ್‌ನಲ್ಲಿ ಮ್ಯಾನ್‌ಹೋಲ್‌ಗಳು ಹೊಡೆದಿದ್ದು, ಅದನ್ನು ಮಾಡಿಕೊಡಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಎ.ಇ. ರವರಿಗೆ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ –191 ಸಿಂಗಸಂದ್ರ

21/11/2020
ಅಧ್ಯಕ್ಷರು
ವಾರ್ಡ್ ಕಮಿಟಿ ಅಧ್ಯಕ್ಷರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ನಂ 191, ಸಿಂಗಸಂದ್ರ

Scanned by CamScanner